**<u>ಸಾಕ್ಷಿ ಯನ್ನು ದಿಃ 12.08.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಬಿ ಆರ್ ಆರ್ ವಕೀಲರಿಂದ:</u>**

**<u>ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಃ-</u>**

1. ಆರ್ ಆರ್ ಟಿ ನಂ.89/2016-17 ರ ಆದೇಶ ಪುಟ, ಅಪೀಲಿನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿಪಿ.21 ಮತ್ತು ನಿಪಿ.22** ಎಂದು ಗುರುತಿಸಲಾಗಿದೆ.

2. ತಹಶೀಲ್ದಾರ್ ರವರ ಕಚೇರಿ ಟಿಪ್ಪಣಿ ಮತ್ತು ಅದರ ವರದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ **ನಿಪಿ.23** ಎಂದು ಗುರುತಿಸಲಾಗಿದೆ.

3. ತಹಶೀಲ್ದಾರ್ ರವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.24 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 11ನೇ ಪ್ರತಿವಾದಿ ಪರ ಶ್ರೀ ಜಿ ಎ ಆರ್ ವಕೀಲರಿಂದಃ</u>**

ನಿಪಿ.21 ಪೂರ್ಣ ಪ್ರಮಾಣವಾಗಿ ಇತ್ಯರ್ಥವಾಗದೇ ವಜಾ ಆಗಿರುತ್ತದೆ. ಸಾಕ್ಷಿ ಮುಂದುವರೆದು, ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಮೌಖಿಕವಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ನಿಪಿ.21 ರ ಪ್ರಕರಣದಲ್ಲಿ 11ನೇ ಪ್ರತಿವಾದಿಗೆ ನೋಟಿಸ್ ಜಾರಿಯಾಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.23 ರಲ್ಲಿ ಸರ್ವೆ ನಂ.36/7 ರಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ವರದಿ ನೀಡಿದ್ದಾರೆ ಎಂದರೆ ಸಾಕ್ಷಿಯು ತಪ್ಪು ವರದಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.23 ರಲ್ಲಿ ಸರ್ವೆ ನಂ.36/7 ರಲ್ಲಿ ಕುಮಾರ್ ಎನ್ನುವವರ ಹೆಸರಿನಲ್ಲಿ ಪಹಣಿ ಎಂದು ಎಂದು ವರದಿ ನೀಡಿದ್ದಾರೆ ಎಂದರೆ ಸಾಕ್ಷಿಯು ತಪ್ಪು ವರದಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.23 ರ ಸರ್ವೆ ಸ್ಕೆಚ್ ನಲ್ಲಿ ಸರ್ವೆ ನಂ.36/7ರಲ್ಲಿ ನಮ್ಮ

ಸ್ವಾಧೀನ ತೋರಿಸಲಾಗಿದೆ ಎಂದರೆ ಸಾಕ್ಷಿಯು ತಪ್ಪು ವರದಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.23 ರ ವರದಿ ನಮ್ಮ ಕ್ರಯಪತ್ರದ ಚೆಕ್ಕುಬಂದಿಯಂತೆ ಸರ್ವೆ ನಂ.36/7ಕ್ಕೆ ಅನುಗುಣವಾಗಿದ್ದು, ಅದೇ ರೀತಿ ನಾವು ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ದಾವೇ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**12ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ. 4ನೇ ಪ್ರತಿವಾದಿ ಗೈರು ಹಾಜರಿದ್ದು, ನ್ಯಾಯ ಸಮಾನತೆಯ ದೃಷ್ಟಿಯಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.